ಚಿಗಟಗಳು ಪಟ್ಟನೆ ಹಾರಿ ಬಿಡುತ್ತವೆ, ಹಿಡಿದ ತಕ್ಷಣ ಬೆರಳಲ್ಲೇ ಹೊಸಕಿ ಉಸಿರುಗಟ್ಟಿಸಿ ಆಮೇಲೆ ನೆಲಕ್ಕೆ ಹಾಕಿ ಹೆಬ್ಬೆರಳಲ್ಲಿ ಕುಕ್ಕಬೇಕು ಅಂತ ಅಮ್ಮ ಹೇಳಿಕೊಟ್ಟರು. ಅಲ್ಲಿಂದ ನನಗೂ ನನ್ನ ತಮ್ಮನಿಗೂ ಇದೇ ಒಂದು ಬದುಕಾಗಿ ಹೋಯ್ತು ಸುಮ್ಮನೆ ಕುಳಿತಿರುವ ನಾಯಿಯನ್ನು ಅಡ್ಡಡ್ಡ ಮಲಗಿಸೋದು, ಶೋಧ ನಡೆಸೋದು, ಪುಳಪುಳನೆ ಸಂದಿಗೆ ಸರಿದು ಓಡುತ್ತಿದ್ದ ಚಿಗಟಗಳನ್ನು ಸಂಹಾರ ನಡೆಸೋದು. ಮನೆಯಲ್ಲಿ ಕರಿಗಾರೆ ನೆಲವಾದ್ದರಿಂದ ಕೆಲವೊಮ್ಮೆ ಅರೆಜೀವವಾದ ಚಿಗಟಗಳು ತಪ್ಪಿಸಿಕೊಂಡು ಎತ್ತಲೋ ಹಾರಿಬಿಡುತ್ತಿದ್ದವು. ಇದ್ದದ್ದರಲ್ಲಿ ದಪ್ಪದ ಚಿಗಟ ಹಿಡಿಯೋಕೆ ನನ್ನ ಇಷ್ಟ. ಯಾಕೆಂದರೆ ದಪ್ಪ ಚಿಗಟವನ್ನ ಹೆಬ್ಬೆರಳಿನಲ್ಲಿ ಕುಕ್ಕುವಾಗ 'ಚಟ್' ಅಂತ ಆಗುವ ಸದ್ದು ಮತ್ತು ಕುಕ್ಕುವಾಗ ಆ ಚಿಗಟಗಳು ಹೆಬ್ಬೆರಳಿಗೆ ಕೊಡುತ್ತಿದ್ದ ಸ್ಪರ್ಶಸುಖದ ಮಜವೇ ಬೇರೆ. ಕೆಲವೊಮ್ಮೆಯಂತೂ ಒಂದು ಭಾಗದಿಂದ ಅವು ಹರಿದು ಅದೆಷ್ಟು ವೇಗದಲ್ಲಿ ದೇಹದ ಇನ್ನೊಂದು ಭಾಗಕ್ಕೆ ಓಡುತ್ತಿದ್ದವೆಂದರೆ ನಮಗೆ ಅವುಗಳ ಬೇಟೆಯೊಂದೇ ಪರಮಗುರಿಯಾಗಿ ಚರ್ಚಿಲ್‌ನ ಎತ್ತಿ ಇನ್ನೊಂದು ಭಾಗಕ್ಕೆ ಕುಕ್ಕರಬಡಿದು ಮಲಗಿಸಿ ಚಿಗಟಗಳನ್ನು ಹಿಡಿದು ಹಾಕುತ್ತಿದ್ದೆವು. ನಮ್ಮ ಈ ಗಂಭೀರ ಹುಡುಕಾಟಕ್ಕೆ ಚರ್ಚಿಲ್ ಒಮ್ಮೆಯೂ ಪ್ರತಿರೋಧ ತೋರಿಸುತ್ತಿರಲಿಲ್ಲ.

ಹಾಗೆ ಚರ್ಚಿಲ್ ಪ್ರತಿರೋಧ ಮಾಡಿದ್ದು ಒಮ್ಮೆ ಮಾತ್ರ: ಒಂದು ಸಾರ್ತಿ ಸುಮ್ಮನೇ ಅವನ ಕಿವಿ ತಡವುತ್ತ ಇದ್ದ ನನ್ನ ಕೈ ಹಸ್ತಕ್ಕೆ ರಕ್ತದ ಕಲೆ ಹತ್ತಿದ್ದು ನೋಡಿ ಒಂದು ಕ್ಷಣ ಗಾಬರಿಯಾಯ್ತು. ಇದೇನು ಹೀಗಾಯ್ತು ಅಂತ ಪರೀಕ್ಷೆ ಮಾಡಿದರೆ ಚರ್ಚಿಲ್‌ನ ಕಿವಿಯೊಳಗೆಲ್ಲ ಉಣ್ಣೆಗಳ ಕಾಲೊನಿಯೇ ಮನೆಮಾಡಿದೆ! ನಾನು ಹೌಹಾರಿಹೋದೆ. ಸ್ವಲ್ಪ ಹೆಚ್ಚಿಗೆ ಕಾಲ ಚರ್ಚಿಲ್‌ನ ಮೈಶೋಧ ನಡೆಸಲಿಲ್ಲವಾಗಿ ಚಿಗಟಗಳ ಜೊತೆಗೆ ರಕ್ತದ ಚೀಲದಂತಿರುತ್ತಿದ್ದ ಕರಿಉಣ್ಣೆಗಳು ಹತ್ತಿದ್ದವು. ಅಲ್ಲಿಂದ ಶುರುವಾಯ್ತಪ್ಪ ಉಣ್ಣೆಯ ಸಂಹಾರ. ತೆಗೆದಷ್ಟೂ ಉಕ್ಕುತ್ತಿದ್ದ ಅವುಗಳನ್ನು ಕುಕ್ಕಿ ಕುಕ್ಕಿ ಕೈಯೆಲ್ಲ ರಕ್ತ ಮಾಡಿಕೊಂಡು ನಾನು ಮತ್ತು ನನ್ನ ತಮ್ಮ ಕೊಲೆಪಾತಕಿಗಳೇ ಆಗಿ ಹೋಗಿದ್ದೆವು. ನಡುಮನೆಯಲ್ಲಿ ನೆಲದ ಮೇಲೆ ಕೂತಿದ್ದ ನನ್ನ ಪಕ್ಕ ಬಂದ ಚರ್ಚಿಲ್ ಎಂದಿನಂತೆ ಮೈಗೆ ಒತ್ತರಿಸಿಕೊಂಡು ಕುಳಿತ. ಅವನ ಮುಂಗೈಯನ್ನು ಎಂದಿನ ಅಭ್ಯಾಸಬಲದಿಂದ ಹಿಡಿದು ಸವರತೊಡಗಿದೆ. ಅದೇನೋ ಕಿರಿಕಿರಿಯಾದವನಂತೆ ನನ್ನ ಕೈಯಿಂದ ಅವನ ಕೈಯನ್ನು ಬಿಡಿಸಿಕೊಂಡು ಮುಂಗೈ ನೆಕ್ಕಿಕೊಳ್ಳತೊಡಗಿದ. ಏನಾಗಿದೆ ಇವನಿಗೆ ಅಂತ ನಾನು ಮತ್ತೆ ಅವನ ಮುಂಗೈ ಹಿಡಿದು ಬೆರಳುಗಳ ಸಂದಿ ಹಿಗ್ಗಲಿಸಿದೆ. ನೋಡ್ತೀನಿ, ಅಲ್ಲಿ ಉಣ್ಣೆಗಳ ಬ್ರಹ್ಮಾಂಡವೇ ಇದೆ! ಕುಟುಂಬದ ಮುಖ್ಯಸ್ಥ ದಪ್ಪ ಉಣ್ಣೆಯಿಂದ ಹಿಡಿದು ಬೇರೆಬೇರೆ ಗಾತ್ರದ ಸಣ್ಣ ನತ್ತಿನಂತಹ ಮರಿಯವರೆಗೆ ಅದೆಷ್ಟು ಸಂತಾನಗಳಿದ್ದವೋ ಅಲ್ಲಿ! ನನಗೆ ದಿಗಿಲು ಒಂದೆಡೆ, ನಿಧಿ ಸಿಕ್ಕ ಸಂತೋಷ ಮತ್ತೊಂದೆಡೆ. ಇಷ್ಟು ಮಾತ್ರ ಅಲ್ಲದೆ ಉಗುರಿನ ಸುತ್ತ ಕೂದಲಿನ ಒಳಗೆ ಸಣ್ಣಸಣ್ಣ ಉಣ್ಣೆಗಳ ಆಗರ ಬೇರೆ. ಕಿತ್ತೆ ಕಿತ್ತೆ ಕಿತ್ತೆ... ನನಗೆ ಕೀಳೋದು ಕುಕ್ಕೋದು ಬಿಟ್ಟರೆ ಬೇರೆ ಏನೂ ಈ ಲೋಕದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ, ಹಾಗೆ ಕಿತ್ತೆ. ಅವನು ತನ್ನ ಕೈ ಎಳೆದುಕೊಳ್ಳೋದು, ನಾನು ನನ್ನ ಬಲವನ್ನೆಲ್ಲ ಉಪಯೋಗಿಸಿ ಮತ್ತೆ ಅದನ್ನ ಎಳೆದುಕೊಂಡು ಕೀಳೋದು. ಅವನೂ ತಡೆದು, ತಡೆದು ಕಡೆಗೊಮ್ಮೆ ಕೋರೆಹಲ್ಲುಗಳನ್ನು ತೋರಿಸಿ 'ಗರ್ರ್...' ಅಂದು ಕೈಕಿತ್ತುಕೊಂಡು ಓಡಿ ರೂಮಿನ ಮಂಚದಡಿಯಲ್ಲಿ ಮಲಗಿಬಿಟ್ಟ.

ಹೀಗೆ ನಾವು ಪೂರ್ಣವಾಗಿ ಉಣ್ಣೆಗಳನ್ನು ಹತ್ತಿಕ್ಕಲಾರದೆ ಪಕ್ಕದ ಮನೆಯ ಪಶುಪರಿವೀಕ್ಷಕರಾದ ಕೃಷ್ಣೇಗೌಡರ ಹತ್ತಿರ ಪರಿಹಾರಕ್ಕೆ ಹೋದೆವು. ಅವರು ಕಪ್ಪುಬಣ್ಣದ ಅಂಟಿನಂತ ಮುಲಾಮನ್ನು ಕೊಟ್ಟರು. ಅದರ ವಾಸನೆ ಎಷ್ಟು ಭಯಂಕರವಾಗಿತ್ತೆಂದರೆ ಇಡೀ ಮನೆಯೆಲ್ಲ ಆ ನಾತದಿಂದ ತುಂಬಿ ಹೋಯಿತು. ಕುಡಿಯುವ ನೀರು, ತಿನ್ನುವ ಅನ್ನ ಎಲ್ಲವೂ ಅದೇ ವಾಸನೆ. ಈ